ಸಾಕ್ಷಿಯನ್ನು ದಿಃ **24.06.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ-

ದಿನಾಂಕ 16.04.2021 ರಂದು 1 ನೇ ಪ್ರತಿವಾದಿ ಬರೆದುಕೊಟ್ಟ ಆನ್ ಡಿಮಾಂಡ ಪ್ರಾಮಿಸರಿ ನೋಟನ್ನು ಹಾಜರುಪಡಿಸಿದ್ದು ನಿಪಿ-1 ಎಂದು, ಅದರಲ್ಲಿರುವ ಪ್ರತಿವಾದಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರ 2 ನೇ ಪುಟದಲ್ಲಿ ಹಣ ಸಂದಾಯವಾದ ಬಗ್ಗೆ ರಶೀದಿಯನ್ನು ಕೂಡ 1 ನೇ ಪ್ರತಿವಾದಿ ಬರೆದುಕೊಟ್ಟಿದ್ದಾರೆ. ಸದರಿ ಭಾಗವನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. 2 ನೇ ಪ್ರತಿವಾದಿ ಭದ್ರತೆಗಾಗಿ ಕೊಟ್ಟ ಚೆಕನ್ನು ಹಾಜರುಪಡಿಸಿದ್ದು ನಿಪಿ-2 ಎಂದು, ಅದರಲ್ಲಿರುವ 2 ನೇ ಪ್ರತಿವಾದಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮೂರು ಬ್ಯಾಂಕ ಚಲನಗಳನ್ನು ಹಾಜರು ಪಡಿಸಿದ್ದು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಚೆಕ್ ಅಮಾನ್ಯಗೊಂಡ ಬಗ್ಗೆ ಎರಡು ಬಾಂಕ ಹಿಂಬರಹಗಳನ್ನು ಹಾಜರುಪಡಿಸಿದ್ದು ನಿಪಿ-6 ಮತ್ತು 7 ಎಂದು, 2 ನೇ ಪ್ರತಿವಾದಿ ಕೊಟ್ಟ ಇನ್ನೊಂದು ಚೆಕ್ಕನ್ನು ಹಾಜರುಪಡಿಸಿದ್ದು ನಿಪಿ-8 ಎಂದು, 2 ನೇ ಪ್ರತಿವಾದಿಯ ಸಹಿಯನ್ನು ನಿಪಿ-8(ಎ) ಎಂದು, ಒಂದು ಬಾಂಕ ಹಿಂಬರಹವನ್ನು ನಿಪಿ-9 ಎಂದು, ದಿನಾಂಕ 09.03.2023 ರಂದು ನನ್ನ ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೊಟೀಸನ್ನು ನಿಪಿ-10 ಎಂದು, ಸದರಿ ನೊಟೀಸನ್ನು ಕಳುಹಿಸಿದ ಬಗ್ಗೆ 6 ಅಂಚೆ ರಶೀದಿಗಳನ್ನು ನಿಪಿ-11 ರಿಂದ 16 ಎಂದು ನಾಲ್ಕು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ- 17 ರಿಂದ 20 ಎಂದು, ಒಂದು ನೊಟೀಸ್ ವಾಪಸ್ ಆದ ಬಗ್ಗೆ ವಾಪಸ್ಸಾದ ಅಂಚೆ ಕವರನ್ನು ನಿಪಿ-21 ಎಂದು, ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರ ಒಳಗಿರುವ ನೊಟೀಸನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಕೋರಿಕೆ ಮೇರೆಗೆ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.